ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ

1884ನೇ ಇಸವಿ ಅರ್ಜೀ ನಂಬರ್ 34.

ಮೃತಪಟ್ಟ ನರಸುಹ್ಮಯ್ಯ ಮತ್ತು ಗಂಗಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಂಗನು, ಮೃತಪಟ್ಟ ಸದರೀ ನರಸುಹ್ಮಯ್ಯ, ಗಂಗಮ್ಮನಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕನಾಯಕನಹಳ್ಳಿ ಸ್ಥಳದ ಗೊಲ್ಲರ ನರಸುಹ್ಮಯ್ಯನ ಮಗ ಗಂಗನು, ಡಿಟೋ ವಾಸಸ್ಥರಾಗಿ ಮೃತಪಟ್ಟ ನರಸುಹ್ಮಯ್ಯ, ಗಂಗಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ರಂಗನ ಅರ್ಜೀಯನ್ನು 1884ನೇ ಇಸವೀ ಜುಲೈ ತಿಂಗಳು ತಾರೀಖು 3ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸುಹ್ಮಯ್ಯ, ಗಂಗಮ್ಮ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜೂ೯ ತಿಂಗಳು 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 39.

ಮೃತಪಟ್ಟ ನಾಗೂಸಾನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೆಂಕೂಸಾ, ಮೃತಪಟ್ಟ ಸದರೀ ಖತೀ ಕುಬಾಡಿ ನಾಗೂಸಾಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ತೆಲಗರಪೇಟೇಲಿರುವ ವೆಂಕೂಸಾ ಯೆಂಬವನು, ಡಿಟೋ ವಾಸಸ್ಥನಾಗಿ ಮೃತಪಟ್ಟ ನಾಗೂಸಾನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕೂಸಾ ಅರ್ಜಿಯನ್ನು 1884ನೇ ಇಸವಿ ಜೂ೯ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗೂಸಾನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜೂ೯ ತಿಂಗಳು 2ನೇ ತಾರೀಖಿಲ್ಲಿನ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ತಾರೀಖು 6ನೇ ಜೂ೯ 1884.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ಮಜಕೂರ್ ಮೆದ್ದಗಿರಿ, ಪಾವಗಡ, ಪೆರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ 1884-85ನೇ ತಾರಣಸಂವತ್ಸರದಲ್ಲಿ ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮೀಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಆಮೀಲರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ ಇದರಡಿಲಿ ಕಂಡ ತಾರೀಖುಗಳಲ್ಲಿ ದಿವಿ 11 ಘಂಟೆ ಲುಗಾಯತು ಹರಾಜು ಮಾಡಲಾಧೀತು.

ಷರತ್ತುಗಳು.

1. ಹರಾಜು ಕೈದಾದಕೂಡ್ಲೆ ಆಖೈರ್ ಸವಾಲ್ದಾರನು ಕೇವಡಾ 25 ರೂಪಾಯಿ ಮೇರಿಗೆ ನಗದು ಬೇವಣಿಯನ್ನು ಇಡಬೇಕು, ಹರಾಜು ದೀರ್ವಾ ಸಾಹೆಬರಿಂದ ಮಂಜೂರಾದ ಪಜನೆ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ ಪುನಹಾ ಹರಾಜು ಮಾಡಲ್ಪಟ್ಟು ನಷ್ಟ ಬಂದ ಮೊಬಲಗಿಗೆ ಮೊದಲಿನ ಚಡ ಸವಾಲ್ದಾರನನ್ನು ಗುರಿಮಾಡಲಾಧೀತು, ಮತ್ತು ಬೇವಣಿಯನ್ನು ಸರ್ಕಾರಕ್ಕೆ ಕೇರಿಗೆ ಕೊಳ್ಳಲಾಧೀತು.

ಹರ

2. ಕುರಂಗದ ಕಲ್ಲುಗಳನ್ನು ತೆಗಿಯುವ ವುದ್ದಿಶ್ಯ ಭೂಮಿ ನಾಗುವ೯ಗೆ ನಾಲಾಯಖಾಗುವಂತೆ ಮಾಡಕೂಡದು ಗುಂಡಿಗಳನ್ನು, ಇಜಾರದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯ ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂವಿಗಳನ್ನು ಪುಲ್ಲ ಬನ್ನಿ ಮತ್ತು ಸಾಗುವಳಿಗೆ ಕೊಡಲಾಧೀತು, ಹಾಗೆ ಕೊಡೋಣವರಿಂದ ಕುರಂಗದ ಕಲ್ಲು ಇಜಾರದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್‌ದಾರರಲ್ಲಾ.

5. ಹರಾಜು ಮೊಬಲಗಿನ ಮೇಲೆ ಕೇಕಡಾ $6\frac{1}{4}$ ರೂಪಾಯಿ ಮೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲ್ ತಿಳಿಯಬೇಕಾಗಿದ್ದರೆ ಆಯಾಯ ತಾಲ್ಲೂಕು ಆಮಿಲರಿಗೆ ಬರದು ತಿಳದುಕೊಳ್ಳ ಬಹುದು.

ಹರಾಜು ತಾರೀಖು.

ಮದ್ದಗಿರಿ ತಾಲ್ಲೂಕು	1884ನೇ ಜುಲೈ 15.	ಪಾವಗಡ ತಾಲ್ಲೂಕು	1884ನೇ ಜುಲೈ 21.
ಶಿರಾ ತಾಲ್ಲೂಕು ..	ಡಿಟೋ 26.	ಗುಬ್ಬಿ ತಾಲ್ಲೂಕು ..	ಡಿಟೋ 31.

ತಾರೀಖು 17ನೇ ಜೂ೯ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳ ವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ರೂಬರೂಬು ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ದಸ್ತಾವೇಜು ನಂಬರ್	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟ್ರಿ ಮಾಡಲ್ಪಟ್ಟ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು
60 1882—83	1—6—82	5—6—82	5—6—82	ಲಿಂಗದಹಳ್ಳಿ ವೇಲಣಮನೆ ಲಿಂಗಂಣ.	ಹೊನ್ನವಳ್ಳಿ ತಾಲ್ಲೂಕು ಗುರುಗದಹಳ್ಳಿ ಮಲ್ಲಪಟ್ಟ.	45 ರೂಪಾಯಿಗೆ ಲಿಂಗದಹಳ್ಳಿಗಾವುದಲ್ಲಿ ಇರುವ ಸರ್ವೆ 49ನೇ ನಂಬರ್ ಬಾಗಾಯತು ಜಮೀನು ಪೈಕೀ ತನ್ನ ಹೆಸ್ಸಿ ಬಾಬತು ಜಮೀನು ಕ್ರಯಕ್ಕೆ ಕೊಟ್ಟರುವದಾಗಿ ವಗೈರೆ.

ಮಹಮ್ಮದಲ್ಲಿ,
ಫಾರ್ ರಿಜಿಸ್ಟ್ರಾರ್.

ಮೈಸೂರು ರಿಜಿಸ್ಟ್ರೇಷನ್ ಆಕ್ಟ್.

ತಾರೀಖು 2ನೇ ಜೂ೯ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.